







ನಂತರ ಐನ್ ಮನೆಯ ಮೆಟ್ಟಿಲೇರಿ ದೇವರನೆಲೆಗೆ ಬಂದು ನಮಸ್ಕರಿಸುವರು. ಕನ್ನಿಕೋಂಬರೆಯಲ್ಲಿ ಹಬ್ಬದ ಹಲವು ವಿಧಿವಿಧಾನವನ್ನು ಮುಗಿಸಿ 9.30ಕ್ಕೆ ಕುಟುಂಬದವರೆಲ್ಲ ಸೇರಿ ವಿಶೇಷ ಭೋಜನವನ್ನು ಮಾಡುವರು. ಮನೆಗಳಿಗೆ ತೆರಳಿ ಪ್ರತೀ ಕದಿರನ್ನು ನೆರೆಗೆ ಸಿಕ್ಕಿಸಿ ಕೈಮಡ, ದೇವರ ನೆಲೆಯಾದ ನೆಲ್ಲಕ್ಕಿ ನಡುಬಾಡೆಗೆ, ಮನೆಯ ಮುಂದಿನ ಕನ್ನಿಕಂಬಕ್ಕೆ, ಅಂದು ತಯಾರಿಸಿದ ಪಾಯಸದ ಪಾತ್ರೆಗೆ ಹಾಗೂ ಮನೆಯ ಹಲವು ಭಾಗಗಳಿಗೆಲ್ಲ ಕಟ್ಟುವರು.

ಕೊಡಗಿನ ಕೆಲವೆಡೆ ಹಳೆಯ ಸಂಪ್ರದಾಯದಂತೆ ಬೆಳಿಗ್ಗೆ ಕದುರು ತೆಗೆಯುವ ಪದ್ಧತಿ ಇದೆ. ಹಬ್ಬದ ಅಂಗವಾಗಿ ಕೊಡಗಿನ ಕೆಲವೆಡೆ ವಿಶೇಷ ಖಾದ್ಯವಾದ ಅಕ್ಕಿಯನ್ನು ಹುರಿದು ಪುಡಿಮಾಡಿ ತಯಾರಿಸಿದ ಅಡಿಕೆ ಹಿಟ್ಟು ಹಾಗೂ ಬಾಳೆಹಣ್ಣಿನ ತಂಬಿಟ್ಟನ್ನು ಸವಿಯುತ್ತಾರೆ. ಜೊತೆಗೆ ಮನೆಗಳಿಗೆ ಹಬ್ಬದಿನದಂದು ಬರುವವರೆಲ್ಲರಿಗೂ ನೀಡಿ ಸತ್ಕರಿಸುವರು.

ಮಾರನೆಯ ದಿನದಿಂದ ಕೊಡಗಿನ ಕೆಲವೆಡೆ ಊರಿನ ಹಲವು ಕುಟುಂಬಗಳು ಸೇರಿ ಪುತ್ತರಿ ಹಬ್ಬದ ಪ್ರಯುಕ್ತ ದೇವಾಲಯದಲ್ಲಿ ಪುತ್ತರಿ ಹಾಡನ್ನು ಹಾಡಿ ದೇವರನ್ನು ಕೊಂಡಾಡುವರು. ಊರಿನವರೆಲ್ಲ ಸೇರಿ ನಿಗದಿತ ದಿನದಂದು ಆಯಾಯ ಕುಟುಂಬದ ಐನ್‌ಮನೆಗಳಲ್ಲಿ ಮನೆಪಾಟ್ ಏರ್ಪಡಿಸುವರು.

ಕೆಲವು ದಿನದ ನಂತರ ಊರ ಮುಂದೆ ಎಲ್ಲರೂ ಸೇರಿ ಊರ್‍ರೊಮೆ ಯನ್ನು ಏರ್ಪಡಿಸಿ ಹಿರಿಯರು ದೇವನೆಲೆಯಲ್ಲಿ ವಿಶೇಷ ಭೋಜನವನ್ನಿಟ್ಟು ದೇವರಲ್ಲಿ ಬೇಡಿಕೊಳ್ಳುವರು. ಊರಿನ ಪುರುಷರು, ಮಹಿಳೆಯರು, ಮಕ್ಕಳೆಲ್ಲ ಮಂದ್‌ನಲ್ಲಿ ಸೇರಿ ಸುತ್ತಲೂ ಕೂತು ವಿಶೇಷ ಭೋಜನ ಸವಿಯುವರು. ಸುತ್ತಮುತ್ತಲ ಊರಿನವರು ಮಂದ್‌ನಲ್ಲಿ ಸೇರಿ ಕೋಲಾಟ ಪ್ರದರ್ಶನ ನಡೆಸುವರು.

ಕೊಡಗಿನ ಹೆಚ್ಚಿನೆಡೆ ಪುತ್ತರಿ ಹಬ್ಬದ ಸಾಂಪ್ರದಾಯಿಕ ಆಚರಣೆಗಳು ಮರೆಯಾಗುತ್ತಿದ್ದು, ಇತ್ತೀಚೆಗೆ ಅವರವರ ಮನೆಗಳಲ್ಲಿ ಆಚರಣೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ನಗರಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಸದಸ್ಯರೆಲ್ಲ ಸೇರಿ ಪುತ್ತರಿ ನಮ್ಮೆಯನ್ನು ಅದ್ದೂರಿಯಾಗಿ ಆಚರಿಸುವ ಸಂಪ್ರದಾಯ ಬೆಳೆದಿದೆ.